NOVEMBER 07, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಬಂಗಾಳದ ಕವಿ, ಬಂಕಿಮಚಂದ್ರರು** ರಚಿಸಿದ, 'ವಂದೇ ಮಾತರಂ' ರಾಷ್ಟ್ರೀಯ ಗೀತೆಗೆ, ಇಂದು 150 ವರ್ಷಗಳು ಪೂರ್ಣಗೊಂಡವು. ಕೇಂದ್ರ ಸಂಸ್ಕೃತಿ ಸಚಿವಾಲಯದ ವತಿಯಿಂದ ಹೊಸದಿಲ್ಲಿಯಲ್ಲಿ, ರಾಷ್ಟ್ರೀಯ ಗೀತೆ 'ವಂದೇ ಮಾತರಂ', 150 ವರ್ಷಗಳ ಇತಿಹಾಸ ಮತ್ತು ಸಾಕ್ಷ್ಯಚಿತ್ರ ಪ್ರದರ್ಶನ ಆಯೋಜಿತವಾಯಿತು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಅಂಚೆ ಚೀಟಿ ಮತ್ತು ನಾಣ್ಯ ವನ್ನು ಬಿಡುಗಡೆಗೊಳಿಸಿದರು. ದೇಶಾದ್ಯಂತ 150 ಸ್ಥಳಗಳಲ್ಲಿ, ವರ್ಷವಿಡೀ ಆಯೋಜಿತ, ವಿಶೇಷ ಕಾರ್ಯಕ್ರಮಗಳಿಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ, ಚಾಲನೆ ನೀಡಿ, ಮಾತನಾಡಿದರು.

<><><>

**ಧ್ವನಿ: ಪ್ರಧಾನಮಂತ್ರಿ ನರೇಂದ್ರ ಮೋದಿ 40 ಸೆಕೆಂದುಗಳು**

<><><>

**ವಂದೇ ಮಾತರಂ' ರಾಷ್ಟ್ರವ್ಯಾಪಿ ಕಾರ್ಯಕ್ರಮ,** 2026ರ ನವೆಂಬರ್ 7ರ ವರೆಗೆ ಮುಂದುವರಿಯಲಿದೆ. ಆಕಾಶವಾಣಿ ಧಾರವಾಡ ಕೇಂದ್ರದಲ್ಲಿ, ಇಂದು ಬೆಳಗ್ಗೆ, ತಾಂತ್ರಿಕ ವಿಭಾಗದ ಉಪ ಮಹಾನಿರ್ದೇಶಕ ಅರುಣ ಪ್ರಭಾಕರ, ಕಾರ್ಯಕ್ರಮ ಮುಖ್ಯಸ್ಥ ಶರಣಬಸವ ಚೋಳಿನ ಹಾಗೂ ಸಿಬ್ಬಂದಿ, ವಂದೇ ಮಾತರಂ ಸಾಮೂಹಿಕ ಗೀತ ಗಾಯನದಲ್ಲಿ ಪಾಲ್ಗೊಂಡರು.

<><><>

**ರಕ್ಷಣಾ ಕ್ಷೇತ್ರದ ಕ್ಷಿಪ್ರ ಪ್ರಗತಿಗೆ,** ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ – ಎಂ.ಎಸ್.ಎಂ.ಇ.ಗಳು ಹಾಗೂ ನವೋದ್ಯಮಗಳು, ಮಹತ್ವದ ಕೊಡುಗೆ ನೀಡುತ್ತಿವೆ; ಕೇಂದ್ರ ಸರ್ಕಾರ, ವಿಶ್ವಾಸ ಆಧಾರಿತ ಆಡಳಿತವನ್ನು ಉತ್ತೇಜಿಸುತ್ತಿದ್ದು, ಅನುಸರಣಾ ವ್ಯವಸ್ಥೆಯನ್ನು ಸರಳಗೊಳಿಸಿದೆ ಎಂದು, ಕೇಂದ್ರ ನವ ಹಾಗೂ ನವೀಕರಿಸಬಹುದಾದ, ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಆಯೋಜಿಸಿದ್ದ, ಭಾರತದ ಉತ್ಪಾದಕರ ಪ್ರದರ್ಶನ 2025 ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಮಾತನಾಡಿದರು. ಶೇಕಡ 90 ರಷ್ಟು ರಕ್ಷಣಾ ಉತ್ಪನ್ನಗಳನ್ನು, ದೇಶೀಯವಾಗಿ ತಯಾರಿಸಲಾಗುತ್ತಿದೆ ಎಂದರು.

<><><>

**ರಾಜ್ಯ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ,** ಸಮುದಾಯ ಆಧಾರಿತ, ಕೆರೆಗಳ ಸಂರಕ್ಷಣೆಗಾಗಿ, ಮಹತ್ವದ ಯೋಜನೆ ರೂಪಿಸಿದೆ ಎಂದು, ಸಣ್ಣ ನೀರಾವರಿ ಖಾತೆ ಸಚಿವ, ಎನ್.ಎಸ್. ಬೋಸರಾಜು ತಿಳಿಸಿದ್ದಾರೆ. ಕೆರೆ ನೀರು ಬಳಕೆದಾರರ ಸಂಘಗಳ ಸ್ಥಾಪನೆ; ತನ್ಮೂಲಕ, ಪುರಾತನ ಕೆರೆಗಳ ಸಂರಕ್ಷಣೆ ಹಾಗೂ ಅಭಿವೃದ್ಧಿ ಕಾರ್ಯ ಆರಂಭಿಸಲಾಗಿದೆ. ಸಂಘಗಳು ಜನರಲ್ಲಿ ಜಲ ಸಂರಕ್ಷಣೆಯ ಜಾಗೃತಿ ಮೂಡಿಸುವಲ್ಲಿಯೂ ಯಶಸ್ವಿಯಾಗಿವೆ ಎಂದು, ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ, ಹೇಳಿದ್ದಾರೆ.

<><><>

**ಮೈಸೂರಿನ, ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾ ಸಂಸ್ಥೆ,** ಸಿ.ಎಫ್.ಟಿ.ಆರ್.ಐ. ಖಾಸಗಿ ಸಂಸ್ಥೆ ಸಹಭಾಗಿತ್ವದಲ್ಲಿ, ಸಿರಿಧಾನ್ಯಗಳಿಂದ ಬನ್, ಬರ್ಗರ್, ಪ್ರೊಟೀನ್ ಸ್ಲೈಸ್‌ಗಳಿಗೆ ಹೊಸ ರೂಪ ನೀಡಿದೆ. ಸಿ.ಎಫ್.ಟಿ.ಆರ್.ಐ ತಂತ್ರಜ್ಞಾನ ಅಭಿವೃದ್ಧಿ ವಿಭಾಗದ ಮುಖ್ಯಸ್ಥ, ಅಶುತೋಷ ಇನಾಮದಾರ ಮಾಹಿತಿ ನೀಡಿ, ಆರೋಗ್ಯಕ್ಕೆ ಪೂರಕವಾಗಿರುವ, ಖಾದ್ಯ ಉತ್ಪನ್ನಗಳು, ದೇಶಾದ್ಯಂತ ನಾಲ್ಕು ನೂರಕ್ಕೂ ಹೆಚ್ಚು ಮಳಿಗೆಗಳಲ್ಲಿ ದೊರೆಯಲಿವೆ, ಎಂದರು. ಸಿ.ಎಫ್.ಟಿ.ಆರ್. ನಿರ್ದೇಶಕ ಗಿರಿಧರ್ ಪರ್ವತಂ ಮಾತನಾಡಿ, ಬರ್ಗರ್, ಬನ್ ಜತೆಗೆ ಪ್ರೋಟೀನ್ ರಿಚ್ ಉತ್ಪನ್ನವೊಂದನ್ನು ಆವಿಷ್ಕರಿಸಲಾಗಿದೆ. ಆಧುನಿಕ ಜೀವನಶೈಲಿಗೆ ಒಗ್ಗಿಕೊಂಡಿರುವ ಜನರ, ಆರೋಗ್ಯಕ್ಕೆ ಪೂರಕವಾಗಿದೆ ಎಂದು ತಿಳಿಸಿದರು.

<><><>

**ರೈತರ ಉತ್ಪನ್ನಕ್ಕೆ, ನ್ಯಾಯಯುತ ಮತ್ತು** ಲಾಭದಾಯಕ ಬೆಲೆ, 'ಎಫ್.ಆರ್.ಪಿ' ನಿರ್ಧರಿಸಿರುವುದು, ಕೇಂದ್ರದ ಬಿಜೆಪಿ ಸರ್ಕಾರ. ಸಕ್ಕರೆ ರಫ್ತು ನಿಯಮದಲ್ಲಿ, ಕೇಂದ್ರದ ನೀತಿ ಮತ್ತು ಎಫ್.ಆರ್.ಪಿ ನಿಗದಿಯಲ್ಲಿ, ಕೇಂದ್ರದ ತೀರ್ಮಾನದಿಂದ ಉಂಟಾದ ಸಮಸ್ಯೆ ಕುರಿತು, ಪ್ರಧಾನಮಂತ್ರಿ ಜೊತೆ ಚರ್ಚಿಸಲು, ಸಚಿವ ಸಂಪುಟ ಸಭೆ ನಿರ್ಣಯಿಸಿದೆ  ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಫೇಸ್‌ಬುಕ್‌ನಲ್ಲಿ ಪ್ರಕಟಿಸಿದ್ದಾರೆ. ಈ ಕುರಿತು, ನಿನ್ನೆ ತಡರಾತ್ರಿ, ಮುಖ್ಯಮಂತ್ರಿ ಪ್ರಧಾನಮಂತ್ರಿಯವರಿಗೆ ಪತ್ರ ರವಾನಿಸಿದ್ದಾರೆ. ಈ ಮಧ್ಯೆ, ಕನ್ನಡಪರ ಸಂಘಟನೆಗಳು ಇಂದು ಕಬ್ಬು ಬೆಳೆಗಾರರನ್ನು ಬೆಂಬಲಿಸಿ, ಬೆಳಗಾವಿ ಬಂದ್‌ಗೆ ಕರೆ ನೀಡಿವೆ.

<><><>

**ಬೆಂಗಳೂರು ಗ್ರಾಮಾಂತರ ಜಿಲ್ಲೆ,** ದೇವನಹಳ್ಳಿಯ, ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ, 4 ಪ್ರತ್ಯೇಕ ಪ್ರಕರಣಗಳಲ್ಲಿ, ಒಟ್ಟು 48 ಕಿಲೋ 57 ಗ್ರಾಂ ತೂಕದ ಮಾದಕ ವಸ್ತುಗಳನ್ನು, ಕಸ್ಟಮ್ಸ್ ಅಧಿಕಾರಿಗಳು ವಶ ಪಡಿಸಿಕೊಂಡಿದ್ದಾರೆ. ಬ್ಯಾಂಕಾಕ್‌ನಿಂದ ಆಗಮಿಸಿದ ಪ್ರಯಾಣಿಕರಿಂದ, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ, 48 ಕೋಟಿ ರೂಪಾಯಿ ಅಂದಾಜು ಮೌಲ್ಯದ, ಹೈಡ್ರೋ ಗಾಂಜಾ, ವಶ ಪಡಿಸಿಕೊಂಡು, ಮಾದಕ ವಸ್ತು ನಿಷೇಧ ಕಾಯ್ದೆ ಅಡಿ, ತನಿಖೆ ಮುಂದುವರೆದಿದೆ.

<><><>

**2025–26ನೇ ಸಾಲಿನ ಹಿಂಗಾರು ಹಂಗಾಮಿನ,** ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಬಿಮಾ ಯೋಜನೆಯಡಿ, ಬೆಳೆ ವಿಮೆ ಕಂತು ಪಾವತಿ ಮಾಡಬೇಕು ಎಂದು ಯಾದಗಿರಿ ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕ ರತೇಂದ್ರನಾಥ ಸೂಗುರ ಹೇಳಿದ್ದಾರೆ. ಹಿಂಗಾರು ಬೆಳೆಗಳಾದ ಕಡಲೆ, ಜೋಳ, ಕುಸುಮೆ ಬೆಳೆಗಳಿಗೆ ಡಿಸೆಂಬರ್ 15ರ ಒಳಗೆ ವಿಮಾ ಕಂತು ಪಾವತಿಸಬೇಕು. ಭತ್ತ ಬೆಳೆಗೆ ನವೆಂಬರ್ 15ರ ಒಳಗೆ ವಿಮಾ ಕಂತು ಸಲ್ಲಿಸಬೇಕು ಎಂದು ಅವರು ತಿಳಿಸಿದ್ದಾರೆ.

<><><>

**ನೊಬೆಲ್ ಪ್ರಶಸ್ತಿ ವಿಜೇತ ದೇಶದ ಪ್ರಥಮ ಭೌತ ವಿಜ್ಞಾನಿ** ಸರ್ ಸಿ.ವಿ ರಾಮನ್ ಅವರ ಜಯಂತಿ ದಿನವಾದ ಇಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಎಕ್ಸ್ ಖಾತೆ ಮೂಲಕ ಗೌರವ ನಮನಗಳನ್ನು ಸಲ್ಲಿಸಿದ್ದಾರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>